# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಉಪಲೋಕ್/ಬಿಜಿಎಂ-6009/2020/ಎಆರ್ಇ-6

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ: 16/09/2022

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ 17ನೇ ವರದಿ

ವಿಷಯ: (1) ಶ್ರೀ. ಜೀಶಾನಹಮ್ಮದ್ ಖಾನ್ ಎಫ್. ಪಠಾನ್, ಅಧ್ಯಕ್ಷರು, ಅಂಜುಮಾನ್-ಎ-ಇಸ್ಲಾಂ, ಸವಣೂರು ಟೌನ್ ಮತ್ತು ತಾಲ್ಲೂಕು, ಹಾವೇರಿ ಜಿಲ್ಲೆ; (2) ಶ್ರೀ. ನನ್ನೇಮ್ಮಿಂ ಕೆ. ಬನ್ನೂರ್, ಕಾರ್ಯದರ್ಶಿಗಳು, ಅಂಜುಮಾನ್-ಎ-ಇಸ್ಲಾಂ, ಸವಣೂರು ಟೌನ್ ಮತ್ತು ತಾಲ್ಲೂಕು, ಹಾವೇರಿ ಜಿಲ್ಲೆ ರವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ದೂರುದಾರರಾದ ಶ್ರೀ. ರಿಯಾಜ್ ಅಹಮ್ಮದ್ ಖಾಸಿಂಸಾಬ್ ಚೌದ್ರಿ, ಮಾರ್ಕೆಟ್ ರಸ್ತೆ, ಮಿರ್ಜಾ ಟಾಕೀಸ್ ಹತ್ತಿರ, ಸವಣೂರು, ಹಾವೇರಿ ಜಿಲ್ಲೆರವರು (1) ಶ್ರೀ. ಜೀಶಾನಹಮ್ಮದ್ ಖಾನ್ ಎಫ್. ಪಠಾನ್, ಅಧ್ಯಕ್ಷರು, ಅಂಜುಮಾನ್-ಎ-ಇಸ್ಲಾಂ, ಸವಣೂರು ಟೌನ್ ಮತ್ತು ತಾಲ್ಲೂಕು, ಹಾವೇರಿ ಜಿಲ್ಲೆ; (2) ಶ್ರೀ. ನನ್ನೇಮ್ಮಿಂ ಕೆ. ಬನ್ನೂರ್, ಕಾರ್ಯದರ್ಶಿಗಳು, ಅಂಜುಮಾನ್-ಎ-ಇಸ್ಲಾಂ, ಸವಣೂರು ಟೌನ್ ಮತ್ತು ತಾಲ್ಲೂಕು, ಹಾವೇರಿ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

2. ದೂರುದಾರರು ತಮ್ಮ ದೂರಿನಲ್ಲಿ, ಅಂಜುಮಾನ್-ಎ-ಇಸ್ಲಾಂ ಸಮಿತಿಯಲ್ಲಿ ನಡೆದಿರುವ ಅವ್ಯವಹಾರವು ಈ ಕೆಳಗಿನಂತಿದೆ ಎಂದು ತಿಳಿಸಿರುತ್ತಾರೆ.

> ಸವಣೂರು ನಗರ ಹೊರವಲಯದ ಗದಗ ರಸ್ತೆಗೆ ಹೊಂದಿಕೊಂಡಿರುವ ಅಬ್ದುಲ್ ನಬಿಸಾ ಮಖಾನ ಸ್ಮಶಾನದ ಸುತ್ತಲೂ ಕಾಂಪೌಂಡ್ ಗೋಡೆ ನಿರ್ಮಿಸಲು ಮಂಜೂರಾಗಿರುವ ಅನುದಾನ ಮೊತ್ತ ರೂ. 5 ಲಕ್ಷಗಳು, ಕಾಮಗಾರಿ ನಡೆಸದೇ ದುರ್ಬಳಕೆ; ಸವಣೂರು ನಗರದ ಹಾಸರ್ ಷರೀಫ ದರ್ಗಾ ಕಾಮಗಾರಿಗೆ ಮಂಜೂರಾಗಿರುವ ಅನುದಾನ ಮೊತ್ತ ರೂ. 10

ಲಕ್ಷಗಳು, ಕಾಮಗಾರಿ ನಡೆಸದೇ ದುರ್ಬಳಕೆ; ಶಿಗ್ಗಾಂವ ರಸ್ತೆಯಲ್ಲಿರುವ ಸ್ಮಶಾನದ ಸುತ್ತಲೂ ಕಾಂಪೌಂಡ್ ಗೋಡೆ ನಿರ್ಮಿಸಲು ಮಂಜೂರಾಗಿರುವ ಅನುದಾನ ಮೊತ್ತ ರೂ. 5 ಲಕ್ಷಗಳು, ಕಾಮಗಾರಿ ನಡೆಸದೇ ದುರ್ಬಳಕೆ; ಸವಣೂರು ಅಂಜುಮಾನ್-ಎ-ಇಸ್ಲಾಂ ಮಸೀದಿ ಹೆಸರಿನ ಯಾವುದೇ ಮಸೀದಿ ಇಲ್ಲದಿದ್ದರೂ, ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ, ಮೊತ್ತ ರೂ. 3 ಲಕ್ಷಗಳನ್ನು ಮಂಜೂರು ಮಾಡಿಸಿಕೊಂಡು ದುರ್ಬಳಕೆ; ಸವಣೂರು ಅಂಜುಮಾನ್-ಎ-ಇಸ್ಲಾಂ ಜುಮ್ಮಾ ಮಸೀದಿ ಹೆಸರಿನ ಯಾವುದೇ ಮಸೀದಿ ಇಲ್ಲದಿದ್ದರೂ, ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ, ಮೊತ್ತ ರೂ. 2 ಲಕ್ಷಗಳನ್ನು ಮಂಜೂರು ಮಾಡಿಸಿಕೊಂಡ ದುರ್ಬಳಕೆ; ಹೀಗೆ ಯಾವುದೇ ಕಾಮಗಾರಿಗಳು ನಡೆಯದೇ, ಸ್ಥಳ ಪರಿಶೀಲಿಸದೆ ರೂ. 25 ಲಕ್ಷಗಳ ಅನುದಾನವನ್ನು ದುರ್ಬಳಕೆ ಮಾಡಿ, ಅವ್ಯವಹಾರ ಎಸಗಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ತನಿಖೆಯನ್ನು ನಡೆಸಿ, ಕ್ರಮ ಕೈಗೊಳ್ಳಬೇಕೆಂದು ಕೋರಿ ದೂರನ್ನು ಸಲ್ಲಿಸಿರುತ್ತಾರೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಗಳಲ್ಲಿ ಹಾಸರ್ ಶರೀಫ್ ದರ್ಗ ಮತ್ತು ಸ್ಮಶಾನಕ್ಕೆ ಕಾಂಪೌಂಡ್ ಗೋಡೆಯನ್ನು ಕಟ್ಟಲು ಕರ್ನಾಟಕ ರಾಜ್ಯ ವಕ್ಫ್ ಬೋರ್ಡ್‌ನವರು 10 ಲಕ್ಷ ರೂಪಾಯಿಗಳ ಅನುದಾನವನ್ನು ದಿ. 17/02/2017ರ ಆದೇಶದಂತೆ ಬಿಡುಗಡೆ ಮಾಡಿದ್ದಾರೆ. ವಕ್ಫ್ ಸಂಸ್ಥೆಯ ಅಧ್ಯಕ್ಷರು ಕಾಮಗಾರಿಯನ್ನು ಕೈಗೆತ್ತಿಕೊಂಡು ಸರ್ವೆ ನಂ. 514 ವಿಸ್ತೀರ್ಣ 7.36 ಎಕರೆಗೆ 625 ಅಡಿ ಉದ್ದದ 6 ಅಡಿ ಎತ್ತರದ 4 ಅಡಿ ಪಾಯದ 200 ಅಡಿ ಉದ್ದದ ಪ್ಲಿಂತ್ ಬೀಮ್ 1.5 ಅಡಿ ಅಗಲದ 2 ಅಡಿ ಆಳದ ಕಾಂಪೌಂಡ್ ಗೋಡೆಯನ್ನು ಕಟ್ಟಿ ಪೂರ್ಣ ಪ್ರಮಾಣದ ಹಣವನ್ನು ಉಪಯೋಗಿಸಿದ್ದಾರೆ. ಕ್ರಮ ಸಂಖ್ಯೆ: 28ರಲ್ಲಿ 10 ಲಕ್ಷರೂಪಾಯಿಗಳನ್ನು ಸ್ಮಶಾನದ ಕಾಂಪೌಂಡ್ ಗೋಡೆ ಕಟ್ಟಲು ಬಿಡುಗಡೆ ಮಾಡಿದ್ದು, ಸರ್ವೆ ನಂ. 78 ಮತ್ತು 79ರಲ್ಲಿ 600 ಅಡಿ ಉದ್ದದ ಕಾಂಪೌಂಡ್ ಗೋಡೆಯನ್ನು ಕಟ್ಟಲಾಗಿದೆ. ಸವಣೂರು ಉಪವಿಭಾಗದ ಎ.ಇ.ಇರವರು ಕಾಮಗಾರಿಯನ್ನು ಪರೀಕ್ಷಿಸಿ ದೃಢೀಕರಿಸಿದ್ದಾರೆ. ಕರ್ನಾಟಕ ಸರ್ಕಾರದ ಆದೇಶದ ದಿ. 06/02/2019ರಂದು 3 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿ ಮಸೀದಿ ರಿಪೇರಿ ಮತ್ತು ಪುನರುಜ್ಜೀವನಕ್ಕೆ ಆದೇಶ ಮಾಡಿದ್ದಾರೆ. ಆದರೆ ರಿಪೇರಿ ಮತ್ತು ಪುನರುಜ್ಜೀವನ ಮಾಡಿಸದೆ

ಅಧ್ಯಕ್ಷರು ಸರ್ವೆ ನಂ. 531ರಲ್ಲಿರುವ ಈದ್ಗ ಜಾಗಕ್ಕೆ 200 ಅಡಿ ಉದ್ದದ 4 ಅಡಿ ಎತ್ತರದ 2 ಅಡಿ ಪಾಯದ ಗೋಡೆಯನ್ನು ಕಟ್ಟಿ ಸಂಪೂರ್ಣ ಹಣವನ್ನು ಉಪಯೋಗಿಸಿದ್ದಾರೆ. ಸವಣೂರು ಉಪವಿಭಾಗದ ಎ.ಇ.ಇರವರು ಕಾಮಗಾರಿಯನ್ನು ಪರಿಶೀಲಿಸಿ ದೃಢೀಕರಿಸಿದ್ದಾರೆ ಎಂದು ನಿವೇದಿಸಿಕೊಂಡಿದ್ದಾರೆ.

4. 2 ಮತ್ತು 3ನೇ ಎದುರುದಾರರು ಆಕ್ಷೇಪಣೆಗಳನ್ನು ಸಲ್ಲಿಸಿ ಆಪಾದನೆಗಳನ್ನು ಅಲ್ಲಗಳೆದಿದ್ದಾರೆ. ಮುಂದುವರೆದು, ಕರ್ನಾಟಕ ವಕ್ಫ್ ಬೋರ್ಡ್‌ನವರು ಕೊಟ್ಟಿರುವ ಅನುದಾನದಲ್ಲಿ ಕಾಂಪೌಂಡ್ ಗೋಡೆಯನ್ನು ಕಟ್ಟಲಾಗಿದೆ. ಸಮಿತಿ ಸದಸ್ಯರು ಹಣ ಉಪಯೋಗ ಆಗಿರುವ ಬಗ್ಗೆ ದೃಢೀಕರಿಸಿದ್ದಾರೆ. ಹಾಸರ್ ಶರೀಫ್ ದರ್ಗಾ ಸಮಿತಿ ಸದಸ್ಯರು ಹಣ ಸದುಪಯೋಗವಾಗಿರುವ ಬಗ್ಗೆ ತಿಳುವಳಿಕೆ ಉಳ್ಳವರಾಗಿರುತ್ತಾರೆ. ಹಣ ಬಿಡುಗಡೆಗೊಳಿಸಿದ ಉದ್ದೇಶಕ್ಕೆ ಹಣವನ್ನು ಬಳಸಿಕೊಳ್ಳಲಾಗಿದೆ. ಆ ಬಗ್ಗೆ ವಕ್ಫ್ ಪ್ರಾಧಿಕಾರದವರು ದೃಢೀಕರಣವನ್ನು ಸಹ ಮಾಡಿದ್ದಾರೆ. ಕ್ರೈಂ ನಂ. 32 & 34 ಸವಣೂರು ಪೋಲೀಸ್ ಠಾಣೆಯಲ್ಲಿ ದೂರುದಾರರ ವಿರುದ್ಧ ದೂರು ದಾಖಲಾಗಿರುತ್ತದೆ. ದೂರನ್ನು ಸಲ್ಲಿಸಿದ ನಂತರ ದಾಖಲೆಗಳನ್ನು ಪಡೆದುಕೊಂಡಿರುವುದರಿಂದ ಇದು ಅನುಮಾನಕ್ಕೆ ಎಡೆ ಮಾಡಿಕೊಡುತ್ತದೆ. ದೂರುದಾರರು ಹಾಜರುಪಡಿಸಿರುದ ದಾಖಲೆಗಳು ಖೊಟ್ಟಿ ದಾಖಲೆಗಳಾಗಿರುತ್ತದೆ. ಜಾಮಿಯಾ ಮಸೀದಿ ಪಂಚಾಯತ್ ಕಮಿಟಿ ಮತ್ತು ಇತರರು ಕೊಟ್ಟಿರುವ ಪತ್ರಗಳು ದೂರುದಾರರ ಆಪಾದನೆಗಳು ಸುಳ್ಳು ಎಂದು ತೋರಿಸುತ್ತದೆ. ದೂರುದಾರರು ಮತ್ತು ಇತರೆ ಸುಸ್ತಿದಾರರಿಂದ ವಕ್ಫ್ ಟ್ರಿಬ್ಯುನಲ್‌ನಲ್ಲಿ ನಂ. ಕೆಡಬ್ಲ್ಯೂಟಿ/ಹೆಚ್‌ಯುಆರ್/ಓಎಸ್/9/2018 ವಿಚಾರಣೆಗೆ ಬಾಕಿ ಇರುತ್ತದೆ. ಹಿಂದಿನ ಲೆಕ್ಕಪರಿಶೋಧನಾ ವರದಿಗಳ ಪ್ರಕಾರ ದೂರುದಾರರು ಅವ್ಯವಹಾರಗಳನ್ನು ಮಾಡಿದ್ದಾರೆ. ಆದ್ದರಿಂದ ದೂರನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

5. ದೂರು, ಆಕ್ಷೇಪಣೆ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ ಕಂಡುಬರುವ ಅಂಶವೇನೆಂದರೆ, ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 01 ಡಬ್ಲ್ಯೂಜಿಎ 2017 ದಿ. 17/02/2017 ಕ್ರಮ ಸಂಖ್ಯೆ: 29ರ ಪ್ರಕಾರ ರೂ. 10 ಲಕ್ಷ ರೂಪಾಯಿಗಳ ಅನುದಾನವನ್ನು ಹಾಸರ್ ಷರೀಫ್ ದರ್ಗ ಮತ್ತು ಖಬರಸ್ಥಾನ ಸ್ಮಶಾನಕ್ಕೆ ಕಾಂಪೌಂಡ್ ಗೋಡೆ ಕಟ್ಟಲು ಬಿಡುಗಡೆಯಾಗಿದೆ. ಆದರೆ ಎದುರುದಾರರು ಸರ್ವೆ ನಂ. 514ರಲ್ಲಿರುವ 7 ಎಕರೆ 36 ಗುಂಟೆ ಜಾಗಕ್ಕೆ ಮಾತ್ರ ಕಾಂಪೌಂಡ್ ಗೋಡೆಯನ್ನು ಕಟ್ಟಿದ್ದಾರೆ.

6. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 01 ಡಬ್ಲ್ಯೂಜಿಎ 2017 ದಿ. 17/02/2017 ಕ್ರಮ ಸಂಖ್ಯೆ: 28ರ ಪ್ರಕಾರ ರೂ. 10 ಲಕ್ಷ ರೂಪಾಯಿಗಳ ಅನುದಾನವನ್ನು ಪುನಃ ಅದೇ ಸ್ಮಶಾನಕ್ಕೆ ಕಾಂಪೌಂಡ್ ಗೋಡೆ ಕಟ್ಟಲು ಬಿಡುಗಡೆಯಾಗಿದೆ. ಎದುರುದಾರರು ಸರ್ವೆ ನಂ. 78 ಮತ್ತು 79ರಲ್ಲಿರುವ ಜಾಗಕ್ಕೆ ಕಾಂಪೌಂಡ್ ಗೋಡೆಯನ್ನು ಕಟ್ಟಿದ್ದಾರೆ.

7. ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ/27 ಡಬ್ಲ್ಯೂಜಿಎ 2018 ದಿ. 06/02/2019 ಕ್ರಮ ಸಂಖ್ಯೆ: 102ರ ಪ್ರಕಾರ ರೂ. 3 ಲಕ್ಷ ರೂಪಾಯಿಗಳ ಅನುದಾನವನ್ನು ಅಂಜುಮಾನ್-ಎ-ಇಸ್ಲಾಂ ಮಸೀದಿಯ ರಿಪೇರಿ ಮತ್ತು ಪುನರುಜ್ಜೀವನಕ್ಕಾಗಿ ಮಂಜೂರು ಮಾಡಲಾಗಿದ್ದರೂ ಸಹ ಎದುರುದಾರರು ಸದರಿ ಕಾಮಗಾರಿಯನ್ನು ಮಾಡದೇ ಸರ್ವೆ ನಂ. 531ರಲ್ಲಿರುವ ಈದ್ಗ ಆವರಣಕ್ಕೆ ಕಾಂಪೌಂಡ್ ಗೋಡೆಯನ್ನು ಕಟ್ಟಿ ಕರ್ತವ್ಯ ನಿರ್ಲಕ್ಷತೆಯನ್ನು ತೋರಿದ್ದಾರೆ.

8. ಮೇಲ್ಕಂಡ ಕಾಮಗಾರಿಗಳನ್ನು 2 ಮತ್ತು 3ನೇ ಎದುರುದಾರರು ಕಾಮಗಾರಿ ನಿರ್ವಹಿಸಿರುವುದು ಕಂಡುಬರುತ್ತದೆ. 1ನೇ ಎದುರುದಾರರು ಜಿಲ್ಲಾ ವಕ್ಫ್ ಅಧಿಕಾರಿಯಾಗಿ 2 ಮತ್ತು 3ನೇ ಎದುರುದಾರರು ಮಾಡಿರುವ ಕರ್ತವ್ಯಲೋಪವನ್ನು ವರದಿ ಮಾಡಿದ್ದಾರೆ.

9. ಆದ್ದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1)(ii) ಮತ್ತು (iii) ಸಹವಾಚಕ ದಿ ವಕ್ಫ್ ಆಕ್ಟ್ 1995ರ ನಿಬಂಧನೆಗಳನ್ವಯ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, 2 ಮತ್ತ 3ನೇ ಎದುರುದಾರರಾದ ಶ್ರೀ. ಜೀಶಾನಹಮ್ಮದ್ ಖಾನ್ ಎಫ್. ಪಠಾನ್, ಮತ್ತು ಶ್ರೀ. ನನ್ನೇಮ್ಯಿಂ ಕೆ. ಬನ್ನೂರ್ ರವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ಸಹವಾಚಕ ದಿ ವಕ್ಫ್ ಆಕ್ಟ್ 1995ರ ನಿಬಂಧನೆಗಳ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಹಾಗೂ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ

ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

17/9/22

[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]
**ಉಪಲೋಕಾಯುಕ್ತರು-1,**
**ಕರ್ನಾಟಕ ರಾಜ್ಯ, ಬೆಂಗಳೂರು.**